

ಕರ್ನಾಟಕ – ಕೇರಳ ಗಡಿಭಾಗದ ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಹಳ್ಳಿಯೊಂದರಲ್ಲಿ ಎರಡು ವರ್ಷದ ಹಿಂದಿನ ಘಟನೆಯಿದು. ಆಹಾರ ಅರಸಿ ಕಾಡಾನೆಯೊಂದು ರಸ್ತೆ ಬದಿಗೆ ಬಂದು ರೆಂಬೆಯತ್ತ ಸೊಂಡಿಲು ಚಾಚಿತು. ಅಲ್ಲಿ ವಿದ್ಯುತ್ ಮಾರ್ಗಕ್ಕೆ ಸೊಂಡಿಲು ತಾಗಿ ಆಘಾತಕ್ಕೆ ಒಳಗಾದ ಆನೆ ಅಲ್ಲಿಯೇ ಉರುಳಿ ಜೀವ ಬಿಟ್ಟಿತು. ಮರಣೋತ್ತರ ಪರೀಕ್ಷೆ ನಡೆಸಿದಾಗ ಹೊಟ್ಟೆಯಲ್ಲಿ ಮರಿ ಇತ್ತು.

ತಮಿಳುನಾಡು ಗಡಿಗೆ ಹೊಂದಿಕೊಂಡ ಮಲೆಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ತಾಯಿಯೊಂದು ನಾಲ್ಕು ಹುಲಿಮರಿಗಳೊಂದಿಗೆ ತನ್ನ ಆವಾಸಸ್ಥಾನ ವಿಸ್ತರಣೆಗೆ ಸಂಚರಿಸುತ್ತಲೇ ಇತ್ತು. ದನಗಳನ್ನು ಹುಲಿ ತಿಂದು ಹಾಕಿದವು ಎನ್ನುವ ಆಕ್ರೋಶಕ್ಕೆ ಸ್ಥಳೀಯರು ವಿಷವಿಕ್ಕಿದ್ದರಿಂದ ಅವು ಜೀವ ಬಿಟ್ಟವು.

ಹಾಸನದ ಬೇಲೂರು ತಾಲ್ಲೂಕಿನ ಮಹಿಳೆಯೊಬ್ಬರು ಖುಷಿಯಲ್ಲಿ ತವರು ಮನೆಗೆ ನಡೆದು ಹೋಗುವಾಗಲೇ ಏಕಾಏಕಿ ಕಾಡಾನೆ ದಾಳಿ ಮಾಡಿತು. ತಪ್ಪಿಸಿಕೊಳ್ಳಲು ಆಗದೇ ಸಾವಿಗೀಡಾದರು. ಮೂರು ದಶಕಕ್ಕೂ ಹೆಚ್ಚು ಕಾಲದಿಂದ ಆನೆ ಸೆರೆ ಹಿಡಿಯುವಲ್ಲಿ ತಜ್ಞರಾಗಿದ್ದ ಶೂಟರ್ ವೆಂಕಟೇಶ್ ಕೂಡ ಆನೆ ತುಳಿತದಿಂದಲೇ ಜೀವ ಕಳೆದುಕೊಂಡದ್ದು ದುರಂತವೇ ಸರಿ. ಕಾಲೇಜು ಮುಗಿಸಿಕೊಂಡು ಊರಿಗೆ ಬರುತ್ತಿದ್ದ ವಿದ್ಯಾರ್ಥಿ ಮೇಲೆ ಚಿರತೆ ಎರಗಿದಾಗ ಭಯದಿಂದ ಅಸುನೀಗಿದ್ದು ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೂಕಿನ ಸೋಸಲೆ ಗ್ರಾಮದ ಬಳಿ ವರದಿಯಾಗಿತ್ತು.

ಇವು ಕೆಲವು ಉದಾಹರಣೆಗಳು ಮಾತ್ರ. ಕರ್ನಾಟಕದಲ್ಲಿ ವನ್ಯಜೀವಿ ಹಾಗೂ ಮಾನವ ಸಂಘರ್ಷದ ಇಂತಹ ಪ್ರಕರಣಗಳು ವರದಿಯಾಗುತ್ತಲೇ ಇವೆ. ಕರ್ನಾಟಕ ಅರಣ್ಯ ಇಲಾಖೆ ಸಂಘರ್ಷವನ್ನು ತಪ್ಪಿಸಲು ಪ್ರಯತ್ನಿಸುತ್ತಲೇ ಇದೆ. ತಜ್ಞರ ಜೊತೆಗೆ ತಂತ್ರಜ್ಞಾನದ ನೆರವನ್ನೂ ಪಡೆದುಕೊಳ್ಳುತ್ತಿದೆ. ಹೊಸದಾಗಿ ಆನೆ, ಚಿರತೆ ಕಾರ್ಯಪಡೆಗಳನ್ನು ರಚಿಸಿ ಸಮಸ್ಯೆ ಇರುವ ಪ್ರದೇಶದಲ್ಲಿ ಜನರ ವಿಶ್ವಾಸ ಗಳಿಸುವ ಪ್ರಯತ್ನ ಮಾಡುತ್ತಲೇ ಇದೆ.

ಮೈಸೂರು ವಿಮಾನ ನಿಲ್ದಾಣದ ಸುತ್ತಮುತ್ತಲೂ ಹುಲಿ ಚಲನವಲನ ಜೋರಾಗಿದೆ. ದಕ್ಷಿಣ ಕನ್ನಡದ ಸುಳ್ಯ ಭಾಗದಲ್ಲಿ ಕಾಡಾನೆಗಳು ಆಗಾಗ ಲಗ್ಗೆ ಇಡುತ್ತಿವೆ. ಬೆಂಗಳೂರು ನಗರ ಪ್ರದೇಶದಲ್ಲಿಯೇ ಚಿರತೆ ಗುಂಡೇಟಿಗೆ ಬಲಿ, ಹಾಸನ ಜಿಲ್ಲೆಯಲ್ಲಿ ಸಂಘರ್ಷಕ್ಕೆ ದಸರಾ ಆನೆ ಅರ್ಜುನನೇ ಜೀವ ಕಳೆದುಕೊಂಡ. ತುಮಕೂರು ಜಿಲ್ಲೆಯ ಮನೆಗೆ ಚಿರತೆ ನುಗ್ಗಿ ಮಹಿಳೆಯನ್ನು ಎಳೆದುಕೊಂಡು ಹೋಗಿದೆ. ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ತೋಳ, ಕರಡಿ ದಾಳಿ ಪ್ರಕರಣಗಳು ಹೆಚ್ಚಿವೆ ಎನ್ನುವ ವಿಚಾರ ಸುದ್ದಿಯಾಗುತ್ತಿವೆ.

‘ಹವಾಮಾನ ವೈಪರೀತ್ಯದ ಪರಿಣಾಮ ಅರಣ್ಯದ ಮೇಲೂ ಗಂಭೀರವಾಗಿಯೇ ಆಗಿದೆ. ಆಹಾರದ ಕೊರತೆಯಿಂದ ವನ್ಯಜೀವಿಗಳು ನಾಡಿನತ್ತ ದಾಂಗುಡಿ ಇಡುತ್ತಿವೆ. ಅರಣ್ಯ ನಿರ್ವಹಣೆಯ ಸ್ವರೂಪವೇ ಸಂಪೂರ್ಣ ಬದಲಾಗಿದೆ. ಇಲಾಖೆ ಅಧಿಕಾರಿಗಳು, ನೌಕರರಿಗೆ ನೈಜ ಪಾಠ ಹೇಳಿಕೊಡಬೇಕಾದ ಪರಿಸ್ಥಿತಿ ಎದುರಾಗಿದೆ. ಟೈಗರ್ (ಹುಲಿ)– ಟೂರಿಸ್ಟ್ (ಪ್ರವಾಸಿ) ಒಂದೇ ಕಡೆ ಇರಲೇಬಾರದು. ಪರಿಸರ ಪ್ರವಾಸೋದ್ಯಮವೇ ಮೇಲುಗೈ ಸಾಧಿಸಿದೆ. 2 ದಶಕದ ಅವಧಿಯಲ್ಲಿ ವನ್ಯಜೀವಿ ಹಾಗೂ ಮಾನವ ಸಂಘರ್ಷ ಮಿತಿ ಮೀರಿ ಬೆಳೆಯಲು ಬದಲಾವಣೆಯ ಪರ್ವ ದೊಡ್ಡದೇ ಇದೆ’ ಎಂದು ಕರ್ನಾಟಕ ಅರಣ್ಯ ಇಲಾಖೆಯಲ್ಲಿ 37 ವರ್ಷ ಸೇವೆ ಸಲ್ಲಿಸಿ

## (10 ವರ್ಷದಲ್ಲಿ 2 ಸಾವಿರಕ್ಕೂ ಅಧಿಕ ಪ್ರಾಣಿಗಳ ಸಾವು)

2015–16ರಿಂದ 2025




## ಯಾವ ಪ್ರಾಣಿ: ಎಷ್ಟು ಸಾವು




## ಹಾನಿ ಪ್ರಕರಣಗಳು ಮತ್ತು ಪರಿಹಾರ

2010–11ರಿಂದ 2025–26

**4.01** ಲಕ್ಷ ಹಾನಿ ಪ್ರಕರಣ

**₹204** ಕೋಟಿ ಪರಿಹಾರ

### ಹಾನಿ ಪ್ರಕರಣಗಳಲ್ಲಿ ಇಳಿಕೆ

| ವರ್ಷ | ಹಾನಿಯಾದ ಪ್ರಕರಣ | ಪರಿಹಾರದ ಮೊತ್ತ |
|---|---|---|
| 2023-24 | 37,878 | ₹32 ಕೋಟಿ |
| 2024-25 | 31,534 | ₹29.53 ಕೋಟಿ |
| 2025-26 (ನವೆಂಬರ್‌ವರೆಗೆ) | 25,127 | ₹25 ಕೋಟಿ |

